**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC**-831/2024 **PW**: 1

**ದಿಃ 14.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಪಿ ಆರ್ ಬಿ ವಕೀಲರಿಂದಃ**

ನಾನು ಈ ಅರ್ಜಿಯಲ್ಲಿ ಅರ್ಜಿದಾರಳಾಗಿದ್ದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

**ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀಮತಿ ವಕೀಲರಿಂದಃ**

**1.** ನನ್ನ ವಿದ್ಯಾಭ್ಯಾಸ ಎಂಎ ಎಂ.ಫಿಲ್ ಆಗಿದೆ. ನಾನು ಶಿರಶಿ ಸರಕಾರಿ ಪ್ರಥಮ ದರ್ಜೆ ಕಾಲೇಜನಲ್ಲಿ ಅತಿಥಿ ಉಪನ್ಯಾಸಕಳಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಪ್ರಮಾಣ ಪತ್ರವನ್ನು ನಾನು ಬರೆಯಿಸಿ ಓದಿರುತ್ತೇನೆಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ನನ್ನ ವೃತ್ತಿ ಇಲ್ಲ ಎಂಬುದಾಗಿ ಬರೆಸಿರುತ್ತೇನೆಂದರೆ ಸಾಕ್ಷಿ ನನಗೆ ಈಗ 60 ವರ್ಷ ಮುಕ್ತಯಾವಾಗಿದ್ದು ಆ ಕಾರಣ ಆ ರೀತಿ ಬರೆಸಿರುತ್ತೇನೆಂದು ಹೇಳುತ್ತಾರೆ. ನನಗೆ 60 ವರ್ಷ ವಯಸ್ಸಾಗಿದ್ದರೂ ಕೂಡಾ ಅರ್ಜಿಯಲ್ಲಿ 59 ವರ್ಷ ಎಂದು ಬರೆಸಿರುತ್ತೇನೆಂದರೆ ಸಾಕ್ಷಿ 30.05.2024 ರಂದು ನನಗೆ 60 ವರ್ಷ ತುಂಬಿರುತ್ತದೆ. ಆದರೂ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ 59 ವರ್ಷ ಎಂದು ಬರೆಸಿರುತ್ತೇನೆಂದರೆ ಸಾಕ್ಷಿ ಏನೋ ಮಿಸ್ಟೇಕ ಆಗಿದೆ ಎನ್ನುತ್ತಾರೆ. ಈ ದಿನ ಯಾವ ಕಾರಣಕ್ಕೆ ಸಾಕ್ಷಿ ಕೊಡಲು ಬಂದಿರುತ್ತೀರಿ ಎಂದು ಗೊತ್ತಾ ಎಂದರೆ ಸಾಕ್ಷಿ ಅಪಘಾತವಾಗಿದ್ದಕ್ಕೆ ಎನ್ನುತ್ತಾರೆ.

2. ಅಪಘಾತವಾದ ಸಮಯದಲ್ಲಿ ಕಾರನಲ್ಲೆ ನಾನು ಮತ್ತು ಅಕ್ಕ ಹಾಗೂ ಭಾವ ಮತ್ತು ಚಾಲಕನಿದ್ದ. ಅಪಘಾತದ ಬಗ್ಗೆ ಪೊಲೀಸರಿಗೆ ಯಾರು ಮಾಹಿತಿ ಕೊಟ್ಟರೆಂದರೆ ಸಾಕ್ಷಿ ಆಸ್ಪತ್ರೆಗೆ ಪೊಲೀಸರು ಬಂದಿದ್ದು ಆ ಸಮಯದಲ್ಲಿ ನಾನು ಹೇಳಿಕೆ ಕೊಟ್ಟಿರುತ್ತೇನೆ ಎನ್ನುತ್ತಾರೆ. ಮತ್ತು ನನ್ನ ಅಕ್ಕ ಮರಣ ಹೊಂದಿದ್ದರು ಎನ್ನುತ್ತಾರೆ. ನನ್ನ ಪ್ರಮಾಣ ಪತ್ರದ 2 ನೇ ಖಂಡಿಕೆಯಲ್ಲಿ ಹೇಳಿರುವಂತೆ ರುಜುವಾತು ಪಡಿಸಲು ನಾನು ಯಾವದೇ ದಾಖಲೆಯನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಕೊಟ್ಟಿಲ್ಲ ಎನ್ನುತ್ತಾರೆ. ನನ್ನ ಪ್ರಮಾಣ ಪತ್ರದ 3 ನೇ ಖಂಡಿಕೆಯಲ್ಲಿ ಹೇಳಿರುವ ವಿಚಾರಣೆಗೆ ಸಂಬಂದಿಸಿದಂತೆ ನಾನು ಯಾವದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ನನ್ನ ಪ್ರಮಾಣ ಪತ್ರದ 6 ನೇ ಖಂಡಿಕೆಯಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಯಾವದೇ ಮಾಹಿತಿ ಇಲ್ಲ ಎಂದರೆ ಸರಿ. ಅಪಘಾತವಾದ 6 ತಿಂಗಳ ಒಳಗೆ ಪರಿಹಾರದ ಕೇಸನ್ನು ದಾಖಲಿಸಬೇಕೆಂಬ ಕಾನೂನು ಇದೆ ಎಂದರೆ ಸಾಕ್ಷಿ ಹೌದು ನನಗೆ ಮಾಹಿತಿ ಇದೆ ಎನ್ನುತ್ತಾರೆ. ಅಪಘಾತವಾದ ನಂತರ ನೀವು ವಕೀಲರನ್ನು ಯಾವಾಗ ಬೇಟಿಯಾಗಿದ್ದೀರಿ ಎಂದರೆ ಸಾಕ್ಷಿ ಹೇಳಲು ಆಗುವದಿಲ್ಲ ಎನ್ನುತ್ತಾರೆ. ಅಪಘಾತದ ಬಗ್ಗೆ ಏನು ಮಾಡಬೇಕೆಂಬ ಬಗ್ಗೆ ನಿಮಗೆ ಮಾಹಿತಿ ಇತ್ತಾ ಎಂದರೆ ಸಾಕ್ಷಿ ಮಾಹಿತಿ ಇತ್ತು ಆದರೆ ನನಗೆ ಆರೋಗ್ಯ ಸರಿ ಇಲ್ಲದ ಕಾರಣ ವಿಳಂಬವಾಗಿದೆ ಎನ್ನುತ್ತಾರೆ. ವಕೀಲರು ನಮ್ಮ ಅಕ್ಕ ಮರಣ ಹೊಂದಿದಾಗ ಬೇಟಿಯಾಗಿದ್ದರಂತೆ ಆ ವಿಷಯ ನಮಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದ 8 ನೇ ಖಂಡಿಕೆಯಲ್ಲಿ ಹೇಳಿರುವದು ಎಲ್ಲಾ ಸುಳ್ಳು ನಾನು ಎಲ್ಲಾ ವಿಷಯ ಗೊತ್ತಿದ್ದರೂ ಕೂಡಾ ಬೇಕಂತಲೇ ವಿಳಂಬ ಮಾಡಿ ಈ ಅರ್ಜಿ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ನಾನು ಸದರಿ ಪ್ರಕರಣವನ್ನು ವಿಳಂಬವಾಗಿ ಸಲ್ಲಿಸಿರುವ ಕಾರಣ ನನ್ನ ಅರ್ಜಿ ಊರ್ಜಿತವಾಗುವದಿಲ್ಲ ಎಂದರೆ ಸರಿಯಲ್ಲ. ನನ್ನ ವೈದ್ಯಕೀಯ ಖರ್ಚಿಗಾಗಿ 2 ಲಕ್ಷ ರೂ ಖರ್ಚು ಮಾಡಿದ್ದೇನೆಂದು ತೋರಿಸಲು ನಾನು ಯಾವದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಎಲ್ಲಿಯೂ ಕೂಡಾ ಯಾವ ಕಾರಣಕ್ಕೆ ವಿಳಂಬವಾಯಿತು ಎಂಬ ಬಗ್ಗೆ ಸರಿಯಾದ ವಿವರ ಇರುವದಿಲ್ಲ ಎಂದರೆ ಸಾಕ್ಷಿ ಸುಮ್ಮನೇ ನಿಲ್ಲುತ್ತಾರೆ. ಆ ಕಾರಣಕ್ಕೆ ಸದರಿ ಅರ್ಜಿ ಕಾನೂನು ಪ್ರಕಾರ ಊರ್ಜಿತವಲ್ಲ ಎಂದರೆ ಸಾಕ್ಷಿ ಸುಮ್ಮನೇ ನಿಲ್ಲುತ್ತಾರೆ.

**ಮರು ವಿಚಾರಣೆ ಇಲ್ಲಾ -**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**